
ಜೆ.ಎಚ್. ಪಟೇಲರು ಚಳವಳಿಯ ಹಿಂದೆ ಭಾಷೆ ಸಾಹಿತ್ಯದ ಕಾಳಜಿಗಳಾಚೆ ಬೇರೆ ಹಿತಾಸಕ್ತಿಗಳಿವೆ ಎಂದು ವ್ಯಾಖ್ಯಾನಿಸಿದರು. ಆದರೂ ಪರಿಸ್ಥಿತಿ ಹತೋಟಿಗೆ ಬರಲಿಲ್ಲ. ಸಾಹಿತ್ಯಿಕ ಭಿನ್ನಮತದ ಪ್ರಶ್ನೆಯಾಗಿ ಉಳಿಯಬಹುದಾದ ಸಣ್ಣ ಸಂಗತಿಯು, ದೊಡ್ಡ ವಿವಾದವಾಗಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಿಗೂ ಹಬ್ಬಿತು. ದಲಿತರ ಮೇಲೆ ಹಲ್ಲೆಗಳು ಆರಂಭವಾದವು. ಸವರ್ಣೀಯ ವಿದ್ಯಾರ್ಥಿಗಳು ಹಾಸ್ಟೆಲುಗಳಿಗೆ ನುಗ್ಗಿ ದಲಿತ ವಿದ್ಯಾರ್ಥಿಗಳನ್ನು ಬಡಿಯತೊಡಗಿದರು. ಕಾಲೇಜುಗಳು ಚಳವಳಿ – ಧರಣೆಗಳಿಂದ ರಣರಂಗಗಳಾದವು. ಸಿದ್ಧಲಿಂಗಯ್ಯನವರ ಪ್ರಕಾರ, 'ಬಸವಲಿಂಗಪ್ಪನವರು ಎದೆಗುಂದಿರಲಿಲ್ಲ... ತಮ್ಮ ಪರವಾಗಿ ವಿದ್ಯಾರ್ಥಿಗಳು ಹೇಳಿಕೆ ಕೊಡಬೇಕೆಂದರು. ನಾನು ಡಿ.ಆರ್. ನಾಗರಾಜ್ ಮತ್ತಿತರ ಗೆಳೆಯರೊಡನೆ ಚರ್ಚಿಸಿ, ಒಂದು ಹೇಳಿಕೆ ನೀಡಿದೆ. ಆ ಹೇಳಿಕೆಯಿಂದ ಗಲಭೆ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಆದರೂ ಈ ಹೇಳಿಕೆಯಿಂದ ರಾಜ್ಯದಾದ್ಯಂತ ದಲಿತ ಮತ್ತು ಪ್ರಗತಿಶೀಲ ವಿದ್ಯಾರ್ಥಿಗಳು ಬಸವಲಿಂಗಪ್ಪನವರ ಪರ ಚಳವಳಿಗೆ ಇಳಿಯುವಂತಾಯಿತು... ಆಗ ಬಸವಲಿಂಗಪ್ಪ ದೈವವಿರೋಧಿ, ಕನ್ನಡವಿರೋಧಿ, ಗಾಂಧಿವಿರೋಧಿ ಎಂಬ ಭಾವನೆ ಜನರ ಮನಸ್ಸಿನಲ್ಲಿ ಮನೆಮಾಡಿತ್ತು'.



ದೇವರಾಜ ಅರಸು

ಬಿಬಿಯವರನ್ನು ಮಂತ್ರಿಮಂಡಲದಿಂದ ಕೈಬಿಡಬೇಕೆಂಬ ಒತ್ತಡ ಹೆಚ್ಚುತ್ತಾ ಹೋಯಿತು. ವಿಚಾರವಾದಿ ವಿದ್ಯಾರ್ಥಿ ಬಳಗವು ಬಿಬಿಯವರನ್ನು ತೆಗೆದರೆ ಚಳವಳಿ ಮಾಡುವುದಾಗಿ ಎಚ್ಚರಿಸಿತು. ವಿರೋಧಿಗಳು ಕೆರಳುವಂತೆ ಹೇಳಿಕೆ ಕೊಡುವ, ರಾಜಕೀಯ ವಿರೋಧಿಗಳ ಕೈಗೆ ಅಸ್ತ್ರ ಕೊಡುವ ಬಿಬಿಯವರ ಬಗ್ಗೆ ಅರಸು ಅವರಿಗೆ ಅಸಮಾಧಾನವಿತ್ತು. ಆದರೆ, ಸಾಮಾಜಿಕ ನ್ಯಾಯದ ಪರವಾಗಿದ್ದ ಅವರು, ಸಮರ್ಥವಾಗಿ ಕೆಲಸ ಮಾಡುತ್ತಿದ್ದ ಮಂತ್ರಿಯನ್ನು ತೆಗೆದುಹಾಕಲಾಗದ ಇಕ್ಕಟ್ಟಿಗೆ ಸಿಕ್ಕಿದ್ದರು. ಕೊನೆಗೆ ಮಂತ್ರಿಮಂಡಲ ಪುನಾರಚನೆ ಮಾಡಲು ಎಲ್ಲ ಸಚಿವರೂ ಮುಖ್ಯಮಂತ್ರಿಯವರಿಗೆ ರಾಜೀನಾಮೆ ಸಲ್ಲಿಸುವ ಯುದ್ಧತಂತ್ರ ಹೂಡಲಾಯಿತು. ವಿಧಿಯಿಲ್ಲದೆ ಬಿಬಿಯವರೂ ರಾಜೀನಾಮೆ ಸಲ್ಲಿಸಿದರು. ಆದರೆ, ಮಂತ್ರಿಮಂಡಲ ಪುನಾರಚನೆಯಾದಾಗ ಅವರಿರಲಿಲ್ಲ. ಅವರ ಜಾಗದಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆ.ಎಚ್. ರಂಗನಾಥ್ ಸೇರ್ಪಡೆಗೊಂಡಿದ್ದರು. ಸಾಮಾಜಿಕ ನ್ಯಾಯದ ಪರವಾಗಿದ್ದ ಅರಸು ಅವರ ಅವಧಿಯಲ್ಲಿ, ಶೋಷಿತರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ ಒಬ್ಬ ದಕ್ಷವ್ಯಕ್ತಿ ಅಧಿಕಾರ ಕಳೆದುಕೊಂಡಿದ್ದು ಒಂದು ವೈರುಧ್ಯವಾಗಿತ್ತು. ಹೀಗೆ ಸಾಹಿತ್ಯಿಕ ನೆಲೆಯಿಂದ ಶುರುವಾದ ಬೂಸಾ ಪ್ರಕರಣವು, ಕರ್ನಾಟಕದ ಜಾತಿ, ರಾಜಕಾರಣ ಹಾಗೂ ಮಾಧ್ಯಮ ಕುರಿತಂತೆ ಅನೇಕ ದಿಟಗಳನ್ನು ಕಾಣಿಸುವ ಚಾರಿತ್ರಿಕ ಮಹತ್ವದ ವಿದ್ಯಮಾನವಾಗಿ ಪರಿಣಮಿಸಿತು.